

## ಅಳಿವಿನ ಅಂಚಿನಲ್ಲಿ ಹೆಬ್ಬಾಗಿಲು!

ಅಂಕೋಲಾ ತಾಲ್ಲೂಕಿನ ಹಿಚ್ಕಡದ ಶಾಂತಾರಾಮ ನಾಯಕ ಅವರ ಮನೆ ಪ್ರವೇಶಿಸುತ್ತಿದ್ದಂತೆ ಮನೆಯ ಹೆಬ್ಬಾಗಿಲು ಎಲ್ಲರನ್ನೂ ಆಕರ್ಷಿಸುತ್ತದೆ. ಶಾಂತಾರಾಮ ನಾಯಕರ ಹೂ ಮನಸ್ಸಿನಷ್ಟೆ ಸುಂದರವಾದ ಈ ಹೆಬ್ಬಾಗಿಲು 130ಕ್ಕಿಂತ ಹೆಚ್ಚು ವಸಂತಗಳನ್ನು ಕಳೆದಿದೆ. ಆದರೆ ಈ ಹೆಬ್ಬಾಗಿಲಿನ ಯೌವನಕ್ಕೆ ಮುಪ್ಪು ಬಾರದೆ ತಾನು ಇನ್ನೂ ನೂರಾರು ಕಾಲ ಬದುಕುಳಿಯುವೆ ಎಂಬುದನ್ನು ಸಾರಿ ಹೇಳುವಂತಿದೆ!

ಹಿಚ್ಕಡ ಭಾಗದ ಪಾಂಡುರಂಗ ಆಚಾರಿ ಎನ್ನುವವರ ಸುಂದರ ಕೆತ್ತನೆಯಿಂದ ತಯಾರಿಸಲ್ಪಟ್ಟ ಈ ಹೆಬ್ಬಾಗಿಲಿನ ಕೆತ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆನೆಯನ್ನು ಒಳಗೊಂಡು ಹಲವು ಪ್ರಾಣಿ ಪಕ್ಷಿಗಳು ನಮಗೆ ಗೋಚರಿಸುತ್ತವೆ. ಆಂಗ್ಲ ಭಾಷೆಯಲ್ಲಿ **Black Teak** ಎಂದೇ ಕರೆಯಲ್ಪಡುವ ಬೆಳೆದ ಮತ್ತಿ ಮರದಿಂದ ತಯಾರಿಸಿದ ಈ ಬಾಗಿಲಿಗೆ ವಯಸ್ಸಿನ ಹಂಗೇ ಇಲ್ಲ! ಆಧುನಿಕ ಕಾಲದ ಭರಾಟೆಯಲ್ಲಿ ಇಂತಹ ಬಾಗಿಲು ಇರುವ ಮನೆಗಳನ್ನು ತೆರವುಗೊಳಿಸಿ ಕಾಂಕ್ರೀಟ್ ಮನೆಗಳು ತಲೆ ಎತ್ತುವಂತೆ ಮಾಡುವ ಇಂದಿನ ಕಾಲದಲ್ಲಿ ಈ ಸುಂದರ ಬಾಗಿಲುಗಳು ಅಳಿವಿನಂಚಿಗೆ ಸರಿಯುತ್ತಿವೆ. ಈ ಆಧುನಿಕ ಆಕರ್ಷಣೆ ಮತ್ತು ಹಂಗಿಗೆ ಒಳಗಾಗದೇ ಈ ಬಾಗಿಲನ್ನು ಕಾಪಾಡಿಕೊಂಡು ಬಂದ ಹಿರಿಯ ನಮ್ಮೆಲ್ಲರ ಪ್ರೀತಿಯ ಶಾಂತಣ್ಣನವರಿಗೊಂದು ಸಲಾಮ್!

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ



## 90ರ ದಶಕದ ಸೈಕಲ್ ಡೈನಮೊ

ಜರ್ಮನಿಯ ರಾಬರ್ಟ್ ಬಾಷ್ ಎಂಬಾತ 1923ರಲ್ಲಿ ಸೈಕಲ್ ಡೈನಮೊವನ್ನು ಕಂಡುಹಿಡಿದನು. ಇವುಗಳನ್ನು ಬೈಸಿಕಲ್ ಹಿಂಬದಿ ಚಕ್ರಕ್ಕೆ ಅಳವಡಿಸಲಾಗುತ್ತದೆ. ಬೇಕೆಂದಾಗ ಉಪಯೋಗಿಸಲು ಬೇಡವೆಂದಾಗ ನಿಲ್ಲಿಸಲೆಂದೇ ಪ್ರತ್ಯೇಕ ಬಟನ್ ನೀಡಲಾಗುತ್ತದೆ. ಬಟನ್ ಒತ್ತಿದಾಗ ಸೈಕಲ್ ಚಕ್ರದ ಚಾಲನೆಯು ಡೈನಮೊದ ತಲೆಯಲ್ಲಿರುವ ಚಕ್ರವೂ ತಿರುಗುವಂತೆ ಮಾಡುತ್ತದೆ. ಇದು ಪ್ರತಿಯಾಗಿ ತಂತಿಯ ಸುರುಳಿಯೊಳಗಿರುವ ಅಯಸ್ಕಾಂತವನ್ನು ತಿರುಗುವಂತೆ ಮಾಡುತ್ತದೆ. ತಂತಿಯ ತುದಿಗಳಲ್ಲಿ ಶಕ್ತಿಯು ಹರಿಯುವಂತಾಗುತ್ತದೆ, ತುದಿಗಳ ನಡುವಿನ ಶಕ್ತಿಯ ವ್ಯತ್ಯಾಸದಿಂದಾಗಿ ವಿದ್ಯುತ್‌ಶಕ್ತಿ ಉತ್ಪತ್ತಿಯಾಗಿ ಸೈಕಲ್ ಮುಂಭಾಗದಲ್ಲಿರುವ ಬಲ್ಬ್ ಪ್ರಕಾಶಿಸುತ್ತದೆ. 90ರ ದಶಕದಲ್ಲಿ ನಾನು ಚಿಕ್ಕವನಿದ್ದಾಗ ಆಪ್ತವಾಗಿದ್ದ ಇಂತಹ ಡೈನಮೊಗಳು ಇಂದು ಮೂಲೆಗೆ ಸರಿದಿವೆ. ರಸ್ತೆಗಳಲ್ಲಿ, ಬೀದಿಗಳಲ್ಲಿ ವಿದ್ಯುತ್ ದೀಪಗಳಿಲ್ಲದ ಆಗಿನ ಕಾಲದಲ್ಲಿ ಸೈಕಲ್ ಡೈನಮೊಗಳು ಸಾಕಷ್ಟು ಅನುಕೂಲಕರವಾಗಿದ್ದವು.

–ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ






## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly